**PW-1:** ಟಿ.ಎನ್. ಸಂಜೀವರಾಯಪ್ಪ

ದಿನಾಂಕಃ **24.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ವಿ.ಎಸ್. ವಕೀಲರಿಂದಃ**

1. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಗೊತ್ತು. ತಿಮ್ಮಮ್ಮನಹಳ್ಳಿಯಲ್ಲಿರುವ ನಮ್ಮ ವಾಸದ ಮನೆ ನನ್ನ ಪತ್ನಿಯ ಹೆಸರಿನಲ್ಲಿದೆ. ಸದರಿ ಮನೆ ನಮ್ಮ ತಾತ ಸಂಜೀವಪ್ಪ ರವರಿಂದ ನನ್ನ ತಂದೆಗೆ ಬಂದಿದ್ದು ಆ ನಂತರ ನನ್ನ ಪತ್ನಿಯ ಹೆಸರಿಗೆ ಖಾತೆಯಾಗಿರುತ್ತದೆ. ನನ್ನ ತಾತನಿಂದ ನನ್ನ ಪತ್ನಿಯ ಹೆಸರಿಗೆ ಫವತಿ ವಾರಸು ಮಾಡಿಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರವಿಲ್ಲ. ನಮ್ಮ ಮನೆಯ ಪಕ್ಕದಲ್ಲಿ 2 ನೇ ಪ್ರತಿವಾದಿ ನಾರಪ್ಪ ರವರ ಮನೆ ಇದೆ ಎಂಬುದು ಗೊತ್ತಿಲ್ಲ. ನನ್ನ ಮನೆಗೆ ಹೊಂದಿಕೊಂಡಂತೆ 2 ನೇ ಪ್ರತಿವಾದಿಯ ಮನೆ ಇದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಕ್ಯಾತಗಾನಕೆರೆ ಸ.ನಂ. 214/3 ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

2. ದಿನಾಂಕಃ 14.03.2001 ರಂದು ಈಗ ನನಗೆ ತೋರಿಸಿದ ದಾಖಲೆಯಂತೆ ಸ.ನಂ. 214/3 ಸ್ವತ್ತನ್ನು ನಾನು ಮತ್ತು ನನ್ನ ತಂದೆ ನಾಗಪ್ಪ ರವರು ಪ್ರತಿವಾದಿಗಳ ತಂದೆ ಅಂಜಿನಪ್ಪ ರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕ್ರಯಪತ್ರವನ್ನು ಬರೆದುಕೊಟ್ಟ ಬಗ್ಗೆ ಗೊತ್ತಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯಮಾಡಿರುವ ಸ್ವತ್ತಿನ ಪೂರ್ವಕ್ಕೆಃ ಕೆರೆ ಕಾಲುವೆ, ಪಶ್ಚಿಮಕ್ಕೆಃ ಈಡಿಗರ ಕರಿಯಣ್ಣ ರವರ ಜಮೀನು, ಉತ್ತರಕ್ಕೆಃ ಕ್ರಯದಾರರು ಹಾಗೂ ಬಾಜುದಾರರಾದ ಅಂಜಿನಪ್ಪ ರವರ ಸ.ನಂ. 214/2 ಪೋಡಿ ಸ್ವತ್ತು ಮತ್ತು ದಕ್ಷಿಣಕ್ಕೆಃ ಅಂಜಿನಶಟ್ಟಿ ಮತ್ತು ಬಿ.ಕೆ. ಹಳ್ಳಿ ನಂಜಯ್ಯನವರ ಜಮೀನು ಇದೆ ಎಂದು

ಬರೆದಿದೆ ಎಂದರೆ ಗೊತ್ತಿಲ್ಲ. ನನ್ನ ತಂದೆಯ ತಂದೆ ಹೆಸರು ಸಂಜೀವಪ್ಪ. ಸಂಜೀವಪ್ಪ ರವರ ತಂದೆಯ ಹೆಸರು ಹೊನ್ನೂರಪ್ಪ. ಹೊನ್ನೂರಪ್ಪ ರವರಿಗೆ ನನ್ನ ತಾತ ಸಂಜೀವಪ್ಪ, ತಿಮ್ಮಪ್ಪ ಮತ್ತು ನಾರಪ್ಪ ಎಂಬ ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. 2 ನೇ ಪ್ರತಿವಾದಿ ಮತ್ತು ಅವರ ಪತ್ನಿ ಮತ್ತು ಮಗಳ ಮೇಲೆ ನಾನು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೇನು ಎಂದರೆ ಗೊತ್ತಿಲ್ಲ. ನಾನು ದಾಖಲಿಸಿದ ದೂರಿನ ಆಧಾರದ ಮೇಲೆ ಮಧುಗಿರಿಯ ಮಾನ್ಯ 4 ನೇ ಜಿಲ್ಲಾ ಮತ್ತು ಸತ್ಯ ನ್ಯಾಯಾಲಯದಲ್ಲಿ ಅವರ ವಿರುದ್ಧ ಎಸ್.ಸಿ. 5004/2016 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಸದರಿ ಪ್ರಕರಣವನ್ನು ದಾಖಲಿಸಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2017 ರಲ್ಲಿ ಸದರಿ ಪ್ರಕರಣ ಖುಲಾಸೆಯಾಗಿರುವ ವಿಚಾರ ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು ಮತ್ತು ನನ್ನ ಮಗ ಸಾಕ್ಷಿ ವಿಚಾರಣೆ ನುಡಿದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.2 ರ ಮುಟೇಷನ್ ವಹಿಯನ್ನು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಪಡೆದಿರುತ್ತೇವೆ. ನಾನು ಹಾಜರುಪಡಿಸಿರುವ ಸದರಿ ದಾಖಲೆಯಲ್ಲಿ ಅಂಜಿನಪ್ಪ ಜಂಟಿ ಎಂದು ಬರೆದಿದ್ದು ಅದನ್ನು ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಮರೆಮಾಚಿ ನಾನು ಸುಳ್ಳು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ ಮಾತ್ರ ನಾನು ವಂಶವೃಕ್ಷವನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ.4 ರಲ್ಲಿ ಅಂಜಿನಪ್ಪ ಮತ್ತು ಪ್ರತಿವಾದಿಗಳ ತಂದೆ ಹೆಸರು ಮೇಲಿನ ಜಂಟಿ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ.5 ಅನ್ನು ಈ ದಾವೆಯ ಸಲುವಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.6 ಕಂದಾಯ ರಶೀದಿಯನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 30.08.2003 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ. ನಿಪಿ.1 ರ ಪಟ್ಟಾಪುಸ್ತಕದಲ್ಲಿ ದಿನಾಂಕಃ 04.05.2019 ಎಂದು ನಮೂದಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಹ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು

ಪ್ರತಿವಾದಿಯ ತಂದೆ ಅಂಜಿನಪ್ಪ ಜಂಟಿಯಾಗಿ ನಾಗಲಮಡಿಕೆ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಾನು ಸಾಲ ಪಡೆದಿರುವ ನಿಪಿ.8 ರಲ್ಲಿ ದಾವಾ ಸ್ವತ್ತಿನ ಸರ್ವೇ ನಂಬರ್ ನಮೂದಾಗಿಲ್ಲ ಎಂದರೆ ಸರಿಯಲ್ಲ. 2003-04 ರಲ್ಲಿ ನಾನು ನನ್ನ ತಂದೆ ಮೃತಪಟ್ಟ ನಂತರ ನನ್ನ ಹೆಸರಿಗೆ ದಾಖಲೆಯನ್ನು ಮಾಡಿಸಿಕೊಂಡಿರುತ್ತೇನೆ.

5. 1995 ರ ಫೆಬ್ರವರಿ ಮಾಹೆಯ ದಿನಾಂಕ 25 ರಲ್ಲಿ ನನ್ನ ತಂದೆ ನಾಗಪ್ಪ ಮತ್ತು ಪ್ರತಿವಾದಿಗಳ ತಂದೆ ಅಂಜಿನಪ್ಪ ರವರ ನಡುವೆ ಪಾಲುಪಾರಿಕತ್ ಆಗಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ಪತ್ರದಲ್ಲಿ ನಾಗಪ್ಪ ಮತ್ತು ಅಂಜಿನಪ್ಪ ಸಹೋದರರು ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ಪತ್ರದಲ್ಲಿ ಈ ಹಿಂದೆ ವಿಭಾಗಮಾಡಿಕೊಂಡಿದ್ದು ಅದರಂತೆ ವಿಭಾಗಪತ್ರದಲ್ಲಿ 1 ನೇ ಅಂಜಿನಪ್ಪ ರವರಿಗೆ ಸ.ನಂ. 57/2 ರಲ್ಲಿ ಖರಾಬು 12 ಗುಂಟೆ ಸೇರಿ ಒಳಗೊಂಡ ಜಮೀನು ಅರ್ಧ ಹಿಸ್ಸೆ ಉತ್ತರದ ಕಡೆ ಇರುವ ಸ್ವತ್ತು ಮತ್ತು ತಿಮ್ಮಮ್ಮನಹಳ್ಳಿ ಗ್ರಾಮದ ಹುಲ್ಲಿನ ಬಣವೆಯಲ್ಲಿ ಅರ್ಧ ಹಿಸ್ಸೆ ಉತ್ತರದ ಭಾಗ ಮತ್ತು ಹಾಗೂ ಗ್ರಾಮಠಾಣಾದ ಮನೆಯ ಪಶ್ಚಿಮದಲ್ಲಿ ಇರುವ ಮನೆಯ ಸ್ವತ್ತು ಮತ್ತು ಕ್ಯಾತಗಾನಕೆರೆ ಗಾರ್ವುದ ತರಿ ಜಮೀನು ಅರ್ಧ ಹಿಸ್ಸೆ ಉತ್ತರದ ಕಡೆ ಹಾಗೂ 2 ನೇ ನಾಗಪ್ಪ ರವರ ಭಾಗಕ್ಕೆ ತಿಮ್ಮಮ್ಮನಹಳ್ಳಿ ಸ.ನಂ. 57/2 ರ ಖರಾಬು ಸೇರಿ 12 ಎಕರೆ 28 ಗುಂಟೆ ಪೈಕಿ ದಕ್ಷಿಣದ ಕಡೆ ಇರುವ ಸ್ವತ್ತು. ಅದೇ ಗ್ರಾಮದ ಹುಲ್ಲಿನ ಬಣವೆಯಲ್ಲಿ ಅರ್ಧ ಹಿಸ್ಸೆ ಮತ್ತು ಇದರಲ್ಲಿ ಇರುವ ಹುಣಸೇ ಮರ, ಕ್ಯಾತಗಾನಕೆರೆ ಗ್ರಾಮದ ತರಿ ಜಮೀನಿನ ಅರ್ಧ ಹಿಸ್ಸೆ ನಾಗಪ್ಪ ರವರಿಗೆ ಸೇರಿದ್ದು ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ.

6. ಸದರಿ ವಿಭಾಗಪತ್ರದಂತೆ ಅಂಜಿನಪ್ಪ ಮತ್ತು ನಾಗಪ್ಪ ರವರ ನಡುವೆ ವಿಭಾಗವಾಗಿರುದು ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ವಿಚಾರ ನನ್ನ ಗಮನಕ್ಕೆ ಬಂದಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಅಂಜಿನಪ್ಪ ರವರು ಮೃತಪಟ್ಟಾಗ ಅವರು ತಹಶೀಲ್ದಾರ್ ರವರ ಮುಂದೆ ಖಾತೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅದರಂತೆ ಆರ್.ಆರ್.ಟಿ. ಸಂಖ್ಯೆ: 351/2018-19 ರಂತೆ

ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ. ದಿನಾಂಕಃ 16.07.2019 ರಂದು ತಹಶೀಲ್ದಾರಿ ರವರು ಸ.ನಂ. 57/2 ಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಪಾಡಿಕೊಳ್ಳಲು ಆದೇಶ ಮಾಡಿರುತ್ತಾರೆ ಎಂದರೆ ಸರಿ. ನಾನು ಸದರಿ ಆದೇಶದ ವಿರುದ್ಧ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಆರ್.ಆರ್.ಟಿ. ಅಪೀಲು ಸಂಖ್ಯೆಃ 64/2020-21 ರಂತೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಉಪವಿಭಾಗಧಿಕಾರಿಗಳು ದಿನಾಂಕಃ 21.09.2022 ರಂದು ಎಂ.ಆರ್. 7/1980-81 ರ ನಮೂನೆ 2 ರಂತೆ ಪರಿಶೀಲಿಸಿ ದಿನಾಂಕಃ 19.08.1980 ರಂತೆ ಖಾತೆದಾರರಾದ ಹೊನ್ನೂರಪ್ಪ ರವರ ಫವತಿ ಸಬೂಬು ಅಂಜಿನಪ್ಪ ಮತ್ತು ನಾಗಣ್ಣ ರವರಿಗೆ ಜಂಟಿ ಖಾತೆಗೆ ಆದೇಶಿಸಿರುತ್ತಾರೆ ಎಂದರೆ ಸರಿಯಲ್ಲ.

7. ನಾನು ಸಲ್ಲಿಸಿದ್ದ ಮೇಲ್ಮನವಿಯನ್ನು ಉಪವಿಭಾಗಾಧಿಕಾರಿಗಳು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಖಾಸಾ ದೊಡ್ಡಪ್ಪನ ಮಕ್ಕಳಾಗಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದಿಗೂ ಸಹ ನಾವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸೇರಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. 19080-81 ರಲ್ಲಿ ತಪ್ಪಾಗಿ ನಮೂದಾಗಿದೆ ಎಂಬ ಬಗ್ಗೆ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ದೂರು ನೀಡಿದ್ದೇನೆ. ದೂರ ನೀಡಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಆ ಸಂಬಂಧ ನಾನು ಯಾವುದೇ ದಾಖಲೆ ಹಾಜರುಪಡಿಸದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 52/2 ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಮುಖ್ಯವಿಚಾರಣೆಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.